

# ಗೂಳಿ ಕುಣಿತ ಮತ್ತು ಕುರುಡು ಕಾಂಚಾಣ

**ದುಡ್ಡು ಕೆಟ್ಟದ್ದು ನೋಡಣ್ಣ – ದುಗ್ಗಾಣೆಗೆ**
**ಹೆಡ್ಡನಾಗಬೇಡೋ ತಿಂದಿ ನೀ ಮಣ್ಣ!**
**–ಸಂತ ಶಿಶುನಾಳ ಷರೀಫ**

ಜೂಜಾಡುವುದು ಕೆಟ್ಟದೆಂದು ಪ್ರಪಂಚವೇ ಒಪ್ಪುತ್ತದೆ. ನಾನು ಕೂಡ ಷೇರು ಮಾರುಕಟ್ಟೆಯಲ್ಲಿ, ಲಾಟರಿಯಲ್ಲಿ, ಮಟ್ಕಾ, ಇಸ್ಪೀಟ್ ವಿವಿಧ ರೀತಿಯ ಜೂಜಾಟದಲ್ಲಿ ಹಣ ಕಳೆದುಕೊಂಡ ನಂತರ ಸ್ವವಿಮರ್ಶೆ ಮಾಡಿಕೊಂಡು ಈ ನಿರ್ಣಯಕ್ಕೆ ತಲೆಬಾಗಿದೆ. ಆದರೆ ಕೆಲವು ಮಾಯೆಗಳಿಂದ ವಿಮುಕ್ತರಾಗುವುದು ಅಷ್ಟು ಸುಲಭವಲ್ಲ. ಇತರ ಎಲ್ಲವನ್ನೂ ದೃಢ ಮನಸಿನಿಂದ ದೂರ ಮಾಡಿದೆನಾದರೂ ಷೇರು ಮಾರುಕಟ್ಟೆಯೆಂಬ ಮಾಯಾಜಾಲ ನನ್ನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆಯೆನ್ನಬಹುದು. ಮರಳಿ ಯತ್ನವ ಮಾಡು ಎಂಬ ಉಕ್ತಿಯಂತೆ ಮತ್ತೆ ಮತ್ತೆ ಅದಕ್ಕೆ ಶರಣಾಗುತ್ತಲೇ ಇದ್ದೇನೆ. ಅದಕ್ಕೇ ಪುರಂದರ ದಾಸರ 'ಈಸಬೇಕು ಇದ್ದು ಜಯಿಸಬೇಕು' ಎಂಬ ವಾಣಿಗೆ ಸರ್ವದಾ ನನ್ನ ಅನುಮೋದನೆ.

'ಷೇರ್' ಎಂಬ ಮಾರುಕಟ್ಟೆಯಾಟದಲ್ಲಿರುವ ಆಕರ್ಷಣೆಯೆಂದರೆ – ಸಿರಿವಂತರು, ಮಧ್ಯಮ ವರ್ಗದವರು ಮತ್ತು ಕೆಳ ಮಧ್ಯಮ ವರ್ಗದವರು ಎಂಬ ಭೇದವಿಲ್ಲದೆ ಎಲ್ಲರೂ ಅದರಲ್ಲಿ ಪಾಲ್ಗೊಳ್ಳುವ ಸದವಕಾಶವಿರುವುದು. ಇತ್ತೀಚೆಗೆ ಕೆಲವು ಸ್ನೇಹಿತರ ಸಹವಾಸದಿಂದ ಷೇರು ಮಾರುಕಟ್ಟೆಯ ನನ್ನ ಹಳೆಯ ಚಾಳಿ ನವೀಕರಣಗೊಂಡು ಹಣದ ಬೆನ್ನೇರುವಂತೆ ಮಾಡತೊಡಗಿದೆ.

> ಕೆಲವು ಮಾಯೆಗಳಿಂದ ದೂರವುಳಿಯುವುದು ಸುಲಭವಲ್ಲ. ಆದಕ್ಕೆ ಷೇರು ಮಾರುಕಟ್ಟೆಯೂ ಹೊರತಲ್ಲ. ಬಿಟ್ಟೆನೆಂದರೂ ಬಿಡದೀ ಮಾಯೆ ಎಂಬಂತೆ, ಷೇರು ಮಾರುಕಟ್ಟೆ ತನ್ನ ಜಾಲದಿಂದ ಸಲೀಸಾಗಿ ಯಾರನ್ನೂ ಬಿಟ್ಟುಕೊಡುವುದಿಲ್ಲ.

■ ಕೆ.ಪಿ. ಮಂಜುನಾಥ್

ನನ್ನ ಷೇರು ವ್ಯವಹಾರದ ಆರಂಭದ ಹಿನ್ನೋಟ ಮೆಲುಕು ಹಾಕುವುದಾದರೆ, ನಾನು ಉದ್ಯೋಗ ಮಾಡುತ್ತಿದ್ದ ಬಿ.ಪಿ.ಎಲ್. ಕಂಪನಿಯವರು ಷೇರು ಮಾರುಕಟ್ಟೆಯಲ್ಲಿ 'ಆರಂಭಿಕ ಸಾರ್ವಜನಿಕ ಕೊಡುಗೆ' (ಐಪಿಒ) ಮೂಲಕ ಪ್ರವೇಶಿಸಿ, ವಹಿವಾಟು ಆರಂಭಿಸಲು ನಿರ್ಧಾರ ಮಾಡಿದರು. ಕಂಪನಿ ತನ್ನೆಲ್ಲ ಕಾರ್ಮಿಕ–ಸಿಬ್ಬಂದಿ ಉದ್ಯೋಗಿಗಳಿಗೆ ಷೇರು ನೀಡಿತು. ನನ್ನ ಸಂಪಾದನೆಯಲ್ಲಿ ಮೋಜು ಮಸ್ತಿ ಮಾಡಿಕೊಂಡಿದ್ದ ನಾನು ಆಗೊಮ್ಮೆ ಈಗೊಮ್ಮೆ ಮನೆಗೆ ಸ್ವಲ್ಪ ಹಣ ನೀಡುತ್ತಿದ್ದೆ. ನನ್ನ ಉಳಿತಾಯದ ಸ್ವಲ್ಪ ಹಣದಲ್ಲಿ ಕಂಪನಿ ನೀಡಿದ ಷೇರಿನಲ್ಲಿ 'ಐಪಿಒ' ಹೂಡಿಕೆ ಬಿಡ್ಡಿಂಗ್ ಮಾಡಿದೆ. ಸುಮಾರು ಒಂದು ವರ್ಷದಲ್ಲಿ ನಾಲ್ಕೈದು ಪಟ್ಟು ಹೆಚ್ಚಿತು. ಕೊಂಡ ಷೇರು ಮಾರಾಟ ಮಾಡಿ ಸ್ವಲ್ಪ ಹಣದಲ್ಲಿ ಕ್ಯಾಮೆರಾ ಕೊಂಡುಕೊಂಡೆ. ಉಳಿದ ಹಣದಲ್ಲಿ ಮತ್ತಷ್ಟು ಕಂಪನಿ ಷೇರುಗಳಿಗೆ ಹೂಡಿಕೆ ಮಾಡಿದೆ.

ನನಗೆ ಷೇರು ಕೊಳ್ಳುವುದು–ಮಾರುವುದು ಅದೇ ಕಾಯಕವಾಗಿತ್ತು. ದಿನ ಪತ್ರಿಕೆಗಳಲ್ಲಿ ಬೆಲೆ ನೋಡಿಕೊಂಡು ಷೇರಿನ ಸರ್ಟಿಫಿಕೇಟ್ ಜೋಪಾನವಾಗಿ ಇಡುತ್ತಿದ್ದೆ. ಆದರೆ ಕ್ರಮೇಣ ಉದ್ಯೋಗ ಮಾಡಿಕೊಂಡು ಷೇರು ಆಡುವುದು ಕಷ್ಟವೆನಿಸಿ, ಷೇರು ದಲ್ಲಾಳಿಯನ್ನು ನೇಮಿಸಿದೆ. ಅವನು ನನ್ನ ಖಾತೆಯ ಮಾಹಿತಿ ಆಗಾಗ ನೀಡಿ ಮತ್ತಷ್ಟು ಹೂಡಿಕೆ ಮಾಡಿಸಿ ನಿಷ್ಠೆಯ ನಾಟಕವಾಡಿದ. ಅದನ್ನು ನಂಬಿ ನಾನು ಭದ್ರವಾಗಿ